
# ಬರಹ ವೈವಿಧ್ಯ

ಕತೆ, ಕವಿತೆ, ಕಾದಂಬರಿಗಳು ಮಾತ್ರ ಕ್ರಿಯಾಶೀಲ ಸಾಹಿತ್ಯವಲ್ಲ. ನಮ್ಮ ಸಂವೇದನೆಗೆ ತಾಕುವ, ನಮ್ಮ ಭಾವಲೋಕವನ್ನು ವಿಸ್ತರಿಸುವ ಎಲ್ಲ ಜೀವಂತ ಬರವಣಿಗೆಗಳೂ ಸಾಹಿತ್ಯವೇ. ಆತ್ಮಕತೆಯ ಒಂದು ಪುಟ, ವಿಮರ್ಶೆಯ ಕೆಲವು ಮಾತುಗಳು, ಸಂಶೋಧನೆಯೊಂದರ ಸೂಕ್ಷ್ಮ ಒಳನೋಟ, ಕಳೆದ ದಿನಗಳ ನೆನಪಿನ ಚಿತ್ರಣ ಓದುಗರಿಗೆ ಸ್ಫೂರ್ತಿಯನ್ನು ಕೊಡಬಲ್ಲವು. ಅಂತಹ ಬರವಣಿಗೆಗಳು ನಮ್ಮ ಓದನ್ನು ಇನ್ನಷ್ಟು ಸೂಕ್ಷ್ಮವಾಗಿಸುತ್ತವೆ, ಗಾಢವಾಗಿಸುತ್ತವೆ. ಆದ್ದರಿಂದ, ಈ ಸಂಚಿಕೆಯಲ್ಲಿ ಕತೆಗಳೊಂದಿಗೆ ವೈವಿಧ್ಯಮಯ ಬರಹಗಳನ್ನು ಕೊಡಲು ಪ್ರಯತ್ನಿಸಲಾಗಿದೆ. ಕವಿ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ ಬಹುಕಾಲದ ಗೆಳೆಯ, ಕನ್ನಡದ ಪ್ರತಿಭಾಶಾಲಿ ವಿಮರ್ಶಕ ಗಿರಡ್ಡಿ ಗೋವಿಂದರಾಜ ಅವರ ವ್ಯಕ್ತಿತ್ವವನ್ನು ರೇಖಿಸುವ ಬರಹ 'ಮೂರ್ತರೂಪ ಗಿರಡ್ಡಿ ಗೋವಿಂದರಾಜ' ಈ ಸಂಚಿಕೆಯ ಮುಖ್ಯ ಬರಹಗಳಲ್ಲೊಂದು. ಈ ಬರಹದಲ್ಲಿ ಪಟ್ಟಣಶೆಟ್ಟರು ಧಾರವಾಡದ ತಮ್ಮ ವಿದ್ಯಾರ್ಥಿ ದಿನಗಳನ್ನು ನೆನೆಯುತ್ತಲೇ ಗಿರಡ್ಡಿ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯಿಕ ಪ್ರತಿಭೆಯನ್ನು ಕಾಣಿಸಿದ್ದಾರೆ. ಈ ಲೇಖನ ಗಿರಡ್ಡಿ ಅವರನ್ನು ಮಾತ್ರ ಚಿತ್ರಿಸುವುದಿಲ್ಲ; ಅದು ಧಾರವಾಡದ ಸಾಂಸ್ಕೃತಿಕ ದಿನಗಳ ಚರಿತ್ರೆಯೂ ಆಗುತ್ತದೆ, ಲೇಖಕರ ಆತ್ಮಕತೆಯ ತುಣುಕೂ ಆಗುತ್ತದೆ.



ಈ ಬರಹದೊಂದಿಗೆ ಲೇಖಕ ಹೊರೆಯಾಲ ದೊರೆಸ್ವಾಮಿ ಅವರ ನೆನಪಿನ ಚಿತ್ರಣದ ಪ್ರಬಂಧ 'ಕುಕ್ಕರಹಳ್ಳಿ ಕೆರೆ' ಇದೆ. ಮೈಸೂರಿನ ಸುಪ್ರಸಿದ್ಧ ಕುಕ್ಕರಹಳ್ಳಿ ಕೆರೆಯನ್ನು ಕೇಂದ್ರದಲ್ಲಿಟ್ಟುಕೊಂಡು ವ್ಯಕ್ತಿಯೊಬ್ಬನ ಜೀವನದಲ್ಲಿ ಆಗಿರುವ ಬದಲಾವಣೆಗಳನ್ನು ಇದು ದಾಖಲಿಸುತ್ತದೆ. ಇದಕ್ಕೆ ಲೇಖಕರ ಆತ್ಮಕಥಾನಕದ ರೂಪವಿದೆ. ಅದು ಕೆರೆಯ ಮಡಿಲಲ್ಲಿ ಜರಗುವ, ಲೇಖಕರು ಕಂಡು ಅನುಭವಿಸಿದ ಬದುಕಿನ ಹಲವು ಚಿತ್ರಗಳನ್ನು ಕೊಡುತ್ತದೆ. ಜೀವಜಗತ್ತನ್ನು ಪೊರೆವ ಕೆರೆಯೊಂದು ನಮ್ಮ ಸಂವೇದನೆಯ, ಬದುಕಿನ ಭಾಗವಾಗುವುದು ಪ್ರಬಂಧದಲ್ಲಿದೆ. ಈ ಬಗೆಯ ಕಳೆದ ಕಾಲದ ಚಿತ್ರಗಳನ್ನು ಕೊಡುವ ಬರವಣಿಗೆಗಳು ಬದುಕಿನ ಬೇರೆ ಮುಖಗಳನ್ನು ಕಾಣಿಸುವುದರಿಂದ ಮುಖ್ಯವಾಗುತ್ತವೆ. ಇಂತಹ ಬರಹಗಳು ಕೂಡ ಕತೆ – ಕಾದಂಬರಿಯ ಓದಿನ ಆನಂದವನ್ನೇ ಓದುಗರಿಗೆ ಕೊಡಬಲ್ಲವು.

'ಕಾನೂರು ಹೆಗ್ಗಡಿತಿ', 'ಚಿಕವೀರ ರಾಜೇಂದ್ರ', 'ಕರ್ವಾಲೊ'ದಂತಹ ಕನ್ನಡದ ಮುಖ್ಯ ಕೃತಿಗಳನ್ನು ಇಂಗ್ಲಿಷ್‌ಗೆ ಅನುವಾದಿಸಿರುವ ಅನುವಾದಕಿ ಪದ್ಮಾ ರಾಮಚಂದ್ರ ಶರ್ಮ ಅವರ ಸಂದರ್ಶನವನ್ನು ಈ ಬಾರಿ ಕೊಡಲಾಗಿದೆ. ಪದ್ಮಾ ಅವರು ಕನ್ನಡ ಕವಿ ಬಿ.ಸಿ. ರಾಮಚಂದ್ರ ಶರ್ಮ ಅವರ ಪತ್ನಿ. ರಾಮಚಂದ್ರ ಶರ್ಮರೊಂದಿಗೆ ಹಲವು ಅನುವಾದಗಳಲ್ಲಿ ಭಾಗಿಯಾದವರು. ಅನುವಾದದ ಕುರಿತಂತೆ ಅವರು ಆಡಿರುವ ಮಾತುಗಳು, ಅವರ ಕೆಲವು ನೆನಪುಗಳು ಈ ಸಂದರ್ಶನದಲ್ಲಿವೆ.

ಈ ಬಾರಿಯ 'ಮಯೂರ' ವೈವಿಧ್ಯಮಯ ಬರಹಗಳ ಸಂಪುಟವಾಗಿದೆ. ಇದರ ಒಟ್ಟಾರೆ ಸ್ವರೂಪ ಓದುಗರಿಗೆ ರುಚಿಸಬಹುದು, ಲವಲವಿಕೆಯ ಬರಹಗಳು ಅವರನ್ನು ರಂಜಿಸಬಹುದು ಎಂಬುದು ನಮ್ಮ ನಿರೀಕ್ಷೆ.

**ಮಯೂರ ಬಳಗ**